3. ನಿಲುವಳಿ ಸೂಚನೆ :

ವಿಷಯ : ಶಿವರಾಮ ಕಾರಂತ ಅಥವಾ ಕೆಂಪೇಗೌಡ ಬಡಾವಣೆಯಲ್ಲಿ ಸುಮಾರು 800 ಎಕರೆ ಜಮೀನನ್ನು ಡಿನೋಟಿಫೈ ಮಾಡಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹಾಸನ) :– ಮಾನ್ಯ ಸಭಾಧ್ಯಕ್ಷರೆ, ಇವತ್ತು ನಾವು ನಿಯಮ 60 ರಡಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಶಿವರಾಮ ಕಾರಂತ ಇರಬಹುದು ಅಥವಾ ಕೆಂಪೇಗೌಡ ಬಡಾವಣೆ ಇರಬಹುದು ಇದರಲ್ಲಿ ಸುಮಾರು 800 ಎಕರೆ ಜಮೀನನ್ನು de-notification ಮಾಡಿದ್ದಾರೆಂದು ಇವತ್ತು ರಾಜ್ಯದ ಪತ್ರಿಕೆಗಳಲ್ಲಿ ಬಂದಿರುವ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದರಲ್ಲಿ ರಾಜಕಾರಣಿಗಳ ಒತ್ತಡದ ಮೇಲೆ ಈಗಾಗಲೇ 121 ಎಕರೆ ಜಮೀನು De-notification ಆಗಿದೆ. ಮತ್ತೆ 800 ಎಕರೆ ಜಮೀನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬರದೆ ಆಗುತ್ತಿದೆಯೆಂಬ ಸಂಪೂರ್ಣವಾದ ವಿಷಯಗಳನ್ನು ಇದರಲ್ಲಿ ಹೇಳಿದ್ದಾರೆ. ಒಂದು ಸಾರಿ 4(1) ಮಾಡುತ್ತಾರೆ. 4(1) ಮಾಡಿದ ನಂತರ de-notification ಮಾಡುವ ಅಗತ್ಯ ಏನಿದೆ? ವಶಪಡಿಸಿಕೊಳ್ಳುವಾಗಲೇ ಏನಾದರೂ ಇದ್ದರೆ, de-notification ಯಾವುದೂ ಇಲ್ಲದೆ ಮಾಡುವುದು ಸೂಕ್ತವಲ್ಲವೇ ?

ಸಭಾಧ್ಯಕ್ಷರು :– ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆಂದು ಕೇಳೋಣ. ಪ್ರಸ್ತಾಪ ಮಾಡಿದ್ದೀರಲ್ಲ.

ಶ್ರೀ ಹೆಚ್.ಡಿ. ರೇವಣ್ಣ :– ಉತ್ತರ ಏನು ಹೇಳುವುದು ? ಈ ರಾಜ್ಯದಲ್ಲಿ de-notification ದಂಧೆ ನಡೆಯುತ್ತಿದೆ. ಯಾವಾಗ ಕಡಿವಾಣ ಹಾಕುತ್ತಾರೆ ಹೇಳಲಿ. ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ. ನಾನಿನ್ನೂ ಪ್ರಸ್ತಾವನ್ನೇ ಮಾಡಿಲ್ಲ.

ಸಭಾಧ್ಯಕ್ಷರು :– ಈಗಾಗಲೇ ಪ್ರಸ್ತಾಪ ಆಯಿತು.

ಶ್ರೀ ಹೆಚ್.ಡಿ. ರೇವಣ್ಣ :– ನೀವೂ ಪ್ರಸ್ತಾಪ ಮಾಡದೆ ಉತ್ತರ ಕೊಡುತ್ತೇವೆಂದರೆ ನಮ್ಮ ಅಭ್ಯಂತರವೇನಿಲ್ಲ. ಇದೊಂದೆ ಅಲ್ಲ ಇನ್ನೂ ಇದೆ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :– ಮಾನ್ಯ ಸಭಾಧ್ಯಕ್ಷರೆ ಶ್ರೀ ಹೆಚ್.ಡಿ. ರೇವಣ್ಣನವರು ಒಂದು ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ :– ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ entire ಏನೇನು ಇದೆಯೇ ಅದೆಲ್ಲವನ್ನು ಹೇಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :– ಆಯಿತು. ಕೊಡಬೇಕೋ ಬೇಡವೋ ಎಂದು ಹೇಳುತ್ತೇನೆ. ಇದೊಂದು ಗಂಭೀರವಾದ ವಿಚಾರ. ಇವತ್ತು ಬೆಳಿಗ್ಗೆ ನಾನು ಕೂಡ ಮಾಧ್ಯಮದಲ್ಲಿ ನೋಡಿದ್ದೇನೆ. ಸಾಧಾರಣವಾಗಿ ಇವತ್ತು ಬೆಂಗಳೂರಿನ ಸುತ್ತಮುತ್ತ ಇರುವ ಯಾವುದೇ ಜಾಗಗಳ ಬಗ್ಗೆ ಹಾಗೂ ಎಲ್ಲವನ್ನೂ ಕೂಡ ಸಾರ್ವಜನಿಕರೆಲ್ಲರೂ ಬಹಳ ಸೂಕ್ಷ್ಮವಾಗಿ ನೋಡುವಂತಹ ಸಂಗತಿಗಳು ಪ್ರಾರಂಭವಾಗಿದೆ. ಯಾವುದೇ ರೀತಿಯಲ್ಲೂ ಕೂಡ land notification, de-notification ಎಂದು ಹೇಳುವುದರ ಬಗ್ಗೆ ವ್ಯಾಪಕವಾದ ಚರ್ಚೆಗಳು ನ್ಯಾಯಾಲಯದ ಒಳಗೆ, ಹೊರಗೆ ಮತ್ತು ಸಾರ್ವಜನಿಕ ವಲಯದಲ್ಲಿ ಕೂಡ ನಡೆಯುತ್ತಿರುವುದನ್ನು ಸಹ ನಾವು ನೋಡದ್ದೇವೆ. 2–3 ಪತ್ರಿಕೆಗಳಲ್ಲಿ ಗಂಭೀರವಾಗಿ ಈ ವಿಚಾರ ಪ್ರಸ್ತಾಪವಾಗಿರುವುದನ್ನು ಕೂಡ ನಾವು ಕಂಡಿದ್ದೇವೆ. ಈಗ ಶ್ರೀ ರೇವಣ್ಣನವರು ಕೊಟ್ಟ ನೋಟಿಸ್‌ನ್ನು ಕೂಡ ನಾನು ನೋಡಿದ್ದೇನೆ. ಶಿವರಾಮ ಕಾರಂತರ ಮುಖ್ಯ ಬಡಾವಣೆಗಳ ಬಗ್ಗೆ 2008 ರಲ್ಲಿ ಸುಮಾರು 3546 ಎಕರೆಗೆ ಅಧಿಸೂಚನೆಯನ್ನು ಹೊರಡಿಸಿ ಅದನ್ನು ಒಂದು ಬಡಾವಣೆಯನ್ನಾಗಿ ಪರಿವರ್ತನೆ ಮಾಡಬೇಕೆಂದು ಹೇಳಿರುವುದನ್ನು ನಾವು ಕಂಡಿದ್ದೇನೆ. ಈ ಬಗ್ಗೆ ಪ್ರಕ್ರಿಯೆಗಳು ಈಗಾಗಲೇ ಪ್ರಾರಂಭವಾಗಿದೆ. Notification ಎಲ್ಲೂ ಕೂಡ ಇನ್ನೂ ಆಗಿಲ್ಲ. ಈ ಹಂತದಲ್ಲಿ ಯಾವುದೇ De-notification ಎಂದು ಹೇಳತಕ್ಕಂತ ಶಬ್ದಗಳು ಮತ್ತೊಂದು ಬರುವಂಥ ಸಂದರ್ಭಗಳಲ್ಲಿ. ಏಕೆಂದರೆ notification ಆಗಿಲ್ಲ. ಹಾಗಾಗಿ De-notification ಪ್ರಶ್ನೆಗಳು ಬರುವುದಿಲ್ಲ. ಆದರೆ deletion ಯಾವ ಜಾಗವನ್ನು ನಾವು identify ಮಾಡುತ್ತೇವೋ ಆ identify ಮಾಡಿದ ಜಾಗದಿಂದ notification ಸಂದರ್ಭದಲ್ಲಿ ಒಂದಷ್ಟು ಬಿಡುವಂತದ್ದು, ಸರ್ವೆ ನಂಬರ್‌ಗಳನ್ನು delete ಮಾಡುವುದು ಮತ್ತೊಂದು ಪ್ರಕ್ರಿಯೆಗಳಿರಬಹುದು. ಆದರೂ ಸಹ ಸಾರ್ವಜನಿಕರಿಗೆ ಒಂದು ಪಾರದರ್ಶಕತೆಯನ್ನು ಖಂಡಿತವಾಗಿ ಕೊಡಬೇಕೆಂಬುದು ಈ ಸರ್ಕಾರದ ಉದ್ದೇಶ. ಯಾವುದೇ ಭೂಮಿಗೆ ಸಂಬಂಧಪಟ್ಟಂತೆ notification, de-notification ಈ ರೀತಿಯ ಯಾವುದೇ ಸಂದರ್ಭದಲ್ಲಿ ಕೂಡ ಸಾರ್ವಜನಿಕರಿಗೆ ಸಂಶಯ ಬರುವ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳುವ ಯಾವುದೇ ಪ್ರಯತ್ನಗಳನ್ನು ಮಾಡುವುದಿಲ್ಲ. ಅತ್ಯಂತ ಸೂಕ್ಷ್ಮವಾಗಿ ಇಂತಹ ವಿಚಾರಗಳ

ಬಗ್ಗೆ ಗಮನ ಹರಿಸುತ್ತೇವೆ. ಈಗಾಗಲೇ ಪತ್ರಿಕೆಗಳಲ್ಲಿ ಬಂದಾಗಲೇ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿದ್ದೇನೆ. ಎಲ್ಲೆಲ್ಲಿ ಲ್ಯಾಪ್ಸ್ ಗಳಿವೆ ಎಂಬುದನ್ನು ನೋಡುವ ಕೆಲಸ ಮಾಡಬೇಕೆಂದು ಈ ಕುರಿತು ಆಲೋಚನೆಗಳನ್ನು ಕೂಡ ಮಾಡಿದ್ದೇವೆ. ನಾವು ಪ್ರಾರಂಭಿಕ ಹಂತದಲ್ಲಿ ಎಷ್ಟು ವಿಸ್ತೀರ್ಣವನ್ನು ತೆಗೆದುಕೊಳ್ಳಬೇಕು ಮತ್ತು ಆದರ ನಂತರ ಎಷ್ಟು ಜಾಗಗಳನ್ನು ಆ ಭಾಗದಲ್ಲಿ ಅಥವಾ ಬೇರೆ ಹಂತದಲ್ಲಿ constructions ಅಥವಾ ಮತ್ತೊಂದು ಆಗಿದ್ದರೆ ಅದನ್ನು ಬಿಡಬೇಕು ಎಂದು ಹೇಳುವಂತಹದ್ದು ಮತ್ತು ಸರ್ಕಾರಿ ವಿಚಾರಕ್ಕೆ ಬೇಕಾದಂತಹ ಜಾಗಗಳ ಬಗ್ಗೆ ಏನ್ನನ್ನು ಬಿಡಬೇಕು ಎಂಬ ವಿಚಾರಗಳ ಬಗ್ಗೆ ಏನಾದರೂ ವ್ಯತ್ಯಾಸಗಳು ಇದ್ದರೆ ಅಂತಹ ಸಂಶಯಗಳಿಗೆ ಎಡೆ ಮಾಡಿಕೊಡುವುದಿಲ್ಲ. ಪೂರ್ತಿ notification ಆಗಬೇಕೆಂಬ ಪ್ರಕ್ರಿಯೆಗಳು ಪ್ರಾರಂಭವಾದ ದಿನದಿಂದ ಇವತ್ತಿನವರೆಗೆ ಯಾವ್ಯಾವ ಹಂತದಲ್ಲಿ ಏನೇನು ತೊಂದರೆಗಳಾಗಿದೆ, ಹೆಚ್ಚು ಕಡಿಮೆಯಾಗಿದೆಯೆನ್ನುವುದನ್ನು ವಿಶಧೀಕರಿಸಬೇಕು. ಅದಕ್ಕಾಗಿ ಒಂದು ತನಿಖೆಯನ್ನು initiate ಮಾಡಬೇಕೆಂಬ ಬಗ್ಗೆ ಆಲೋಚನೆ ಮಾಡಿದ್ದೇನೆ. ನಾನು ಇದನ್ನು C.O.D. ಗೆ ಹಸ್ತಾಂತರ ಮಾಡಿ C.O.D. ಅಧಿಕಾರಿಗಳ ಮುಖಾಂತರ ಸಮಗ್ರ ತನಿಖೆಯನ್ನು ಮಾಡಿಸುತ್ತೇನೆ. ಬಡಾವಣೆ ಸಂದರ್ಭದಲ್ಲಿ ಯಾವುದೇ ಒಂದು ಇಂಚು ಜಾಗವನ್ನು ಕೂಡ ಯಾವುದೇ ರೀತಿಯ ಒತ್ತಡಕ್ಕೆ ಯಾವುದೇ ರೀತಿಯ ಅಮಿಷಕ್ಕೆ ಯಾವುದೇ ರೀತಿಯ ಆಚಾತುರ್ಯಕ್ಕೆ ಯಾವುದೇ ರೀತಿಯ ಕಾನೂನು ಬಾಹಿರವಾಗಿ ಆಗುವುದಕ್ಕೆ ನಾನು ಅವಕಾಶಗಳನ್ನು ಕೊಡುವುದಿಲ್ಲ. ಇದರ ಬಗ್ಗೆ ಸಮಗ್ರ CID ತನಿಖೆಯನ್ನು ಮಾಡಿ ವರದಿಯನ್ನು ತರಿಸಿದ ನಂತರ ಮುಂದಿನ ಹೆಜ್ಜೆಯನ್ನು ಇಡುತ್ತೇನೆ ಎನ್ನತಕ್ಕಂತ ಮಾತನ್ನು ಈ ಸದನಕ್ಕೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸಭಾಧ್ಯಕ್ಷರು :– ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ :– ಚರ್ಚೆಯನ್ನು ಮಾಡದೆ ಯಾವ ವಿಷಯವನ್ನು C.O.D. ಗೆ ಕೊಡುತ್ತೀರಿ ಸ್ವಾಮಿ.

ಸಭಾಧ್ಯಕ್ಷರು :– ನಾನೂ ರೂಲಿಂಗ್ ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ :– ನಾವು ಚರ್ಚೆ ಮಾಡೋಣ ನಂತರ ಬೇಕಾದರೆ ಏನಾದರೂ ನಿರ್ಣಯ ಮಾಡಲಿ. ನೀವು ಚರ್ಚೆ ಮಾಡದೆ ನೇರವಾಗಿ COD ಗೆ ಕೊಡುತ್ತೇನೆಂದರೆ ಅರ್ಥ ಏನು ?

(ಗೊಂದಲ)

ಸಭಾಧ್ಯಕ್ಷರು :– ಪ್ರಸ್ತಾವಿತ ವಿಷಯಗಳನ್ನು ಮುಂಗಡ ಪತ್ರದಲ್ಲಿ ಚರ್ಚೆ ಮಾಡುವಾಗ ಸಾಕಷ್ಟು ಅವಕಾಶಗಳಿರುವುದರಿಂದ ನಿಯಮ 60 ರಡಿಯಲ್ಲಿ ನೀಡಿದ ವಿಷಯಕ್ಕೆ ಚರ್ಚೆಗೆ ನಿರಾಕರಿಸಲಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಸಭಾಧ್ಯಕ್ಷರೆ, ಮೊದಲು ಚರ್ಚೆ ಮಾಡಿ ನಂತರ ನೀವು COD ಗಾದರೂ ಕೊಡಿ CBI ಗಾದರೂ ಯಾವುದಕ್ಕಾದರೂ ಕೊಡಿ.

ಸಭಾಧ್ಯಕ್ಷರು :– ನಿರಾಕರಿಸಿದ್ದೇನೆ. ನೀವು ಬಜೆಟ್‌ನಲ್ಲಿ ಸಾಕಷ್ಟು ವಿಚಾರಗಳನ್ನು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ :– ದಯಮಾಡಿ ಯಾವಾಗ COD ಗೆ ಕೊಡುತ್ತೀರೆಂದು ಹೇಳಿ.

ಸಭಾಧ್ಯಕ್ಷರು :– ನಾನು ನಿರಾಕರಿಸಿದ್ದೇನೆ. ಬೇರೆ ರೂಪದಲ್ಲಿ ತನ್ನಿ.

ಶ್ರೀ ಹೆಚ್.ಡಿ.ರೇವಣ್ಣ :– ಪೂರ್ತಿ ಏನೇನು enquiry ನಡೆದಿದೆಯೋ de-notification ಮೇಲೆ ಅದಲ್ಲವನ್ನು ಕೊಡುತ್ತಾರೋ ಅಥವಾ ಇದೊಂದನ್ನು ಕೊಡುತ್ತಾರೋ ಹೇಳಿ. ಅದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಲಿ.

ಸಭಾಧ್ಯಕ್ಷರು :– ಈಗ entire ಆಗಿ COD ಗೆ ಹೇಳಿದ್ದಾರೆ. ಈಗ ವಿತ್ತೀಯ ಕಲಾಪ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಿ.

4. ವಿತ್ತೀಯ ಕಾರ್ಯಕಲಾಪ

2012–13ನೇ ಸಾಲಿನ ಆಯವ್ಯಯ ಅಂದಾಜಿನ ಚರ್ಚೆ

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) :– ಮಾನ್ಯ ಸಭಾಧ್ಯಕ್ಷರೆ, ಈ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಸದಾನಂದ ಗೌಡರು ಈ ರಾಜ್ಯದ ಚೊಚ್ಚಲ ಮುಂಗಡ ಪತ್ರವನ್ನು 2012–13ನೇ ಸಾಲಿಗೆ ಮಂಡಿಸಿದ್ದಾರೆ. ಈ ಬಾರಿ ಬಜೆಟ್ ಮಂಡಿಸಬೇಕೆಂದು ರಾಜ್ಯದಲ್ಲಿ ದೊಡ್ಡ ಜಗಳವೇ ಆಯಿತು. ಶ್ರೀ ಯಡಿಯೂರಪ್ಪನವರು. ನಾನು ಮಂಡಿಸಬೇಕೆಂದು. ಶ್ರೀ ಸದಾನಂದಗೌಡರು ಮುಖ್ಯಮಂತ್ರಿಯಾಗಿ ನಾನೇ ಮಂಡಿಸುತ್ತೇನೆಂದು. ಈ ಬಜೆಟ್ ಮಂಡಿಸುವ ಸಂಘರ್ಷದಲ್ಲಿ ಶ್ರೀ ಯಡಿಯೂರಪ್ಪನವರು ಸೋತರು. ಶ್ರೀ ಸದನಾಂದಗೌಡರು ಗೆದ್ದಿದ್ದಾರೆ. ನಾನು ಶ್ರೀ ಸದಾನಂದಗೌಡರು ಈ ರಾಜ್ಯದ ಮುಖ್ಯಮಂತ್ರಿ ಹಾಗೂ ಹಣಕಾಸಿನ ಮಂತ್ರಿ ಬಜೆಟ್‌ನಲ್ಲಿ ಒಂದು ಹೊಸ ದೃಷ್ಟಿಕೋನ ಹಾಗೂ ದೂರದೃಷ್ಟಿ. ಈ ರಾಜ್ಯದ ಸಮಸ್ಯೆಗಳಿಗೆ ಪರಿಹಾರ ಕೊಡತಕ್ಕಂತಹ ಕಾರ್ಯಕ್ರಮಗಳು, ಜನತೆಯ ಜೀವನವನ್ನು ಮೇಲ್ಮಟ್ಟಕ್ಕೆ ತೆಗೆದುಕೊಂಡು